ಸೃಜನಿ

SRUJANI: Indian Journal of Innovative Research and Development (SIJIRD)
Volume-3 Issue 6, January - February 2025, Pp. 5-14
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# ಆಧುನಿಕ ಸಾಹಿತ್ಯದಲ್ಲಿ ಸಂಗೀತ ಕಛೇರಿಗಳ ವೈಶಿಷ್ಟ್ಯತೆ (ಆಯ್ದ ಕಾದಂಬರಿಗಳನ್ನು ಕುರಿತು)

**ಬಡಿಗೇರ ಮೌನೇಶ್[1] ಮತ್ತು ಡಾ. ಜೋಗಿನಕಟ್ಟೆ ಮಂಜುನಾಥ[2]**

[1]ಸಂಶೋಧಾ ವಿದ್ಯಾರ್ಥಿ, [2]ಪ್ರಾಧ್ಯಾಪಕರು

ಕನ್ನಡ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ. ದಾವಣಗೆರೆ.

**Abstract:**

*ಆಧುನಿಕ ಕನ್ನಡ ಸಾಹಿತ್ಯದಲ್ಲಿ ಅನೇಕ ಕೃತಿಗಳು ಸಂಗೀತವನ್ನು ಕುರಿತು ರಚನೆಯಾಗಿವೆ. ಅದರಲ್ಲಿ ಕಥೆ, ಕಾದಂಬರಿ, ಆತ್ಮಕಥೆ, ಲೇಖನಗಳಲ್ಲಿ ಸಂಗೀತ ಹಾಗೂ ಸಂಗೀತಗಾರರ ಅನೇಕ ವಿಚಾರಗಳು ಪ್ರಸ್ತಾಪಿತವಾಗಿವೆ. ಅವುಗಳಲ್ಲಿ ಕಾದಂಬರಿಗಳ ಪಾಲು ಹೆಚ್ಚೇ ಎನ್ನಬೇಕು. ಮಾಸ್ತಿ, ಅನಕೃ, ತರಾಸು, ದೇವುಡು, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಎಸ್.ಎಲ್.ಭೈರಪ್ಪನವರ ಕಾದಂಬರಿಗಳು ಪ್ರಮುಖವಾದವುಗಳು. ಪ್ರಸ್ತುತ ಲೇಖನದಲ್ಲಿ ಅನಕೃ ಅವರ ಸಂಧ್ಯಾರಾಗ, ಕಟ್ಟಿದ ಬಣ್ಣ, ಮಿಯಾಮಲ್ಹಾರ್ ಕೃತಿಗಳಲ್ಲಿ ಚಿತ್ರಿಸಲಾಗಿರುವ ಸಂಗೀತ ಕಚೇರಿಗಳ ವೈಶಿಷ್ಟ್ಯತೆಯನ್ನು ಕುರಿತು ವಿವರಿಸಲಾಗಿದೆ.*

**Keywords:** *ಕನ್ನಡ ಕಾದಂಬರಿ, ಸಂಗೀತ ಕಛೇರಿ, ಅನಕೃ, ಸಂಧ್ಯಾರಾಗ, ಕಟ್ಟಿದ ಬಣ್ಣ, ಮಿಯಾಮಲ್ಹಾರ್*

## ಪೀಠಿಕೆ

ನಮ್ಮ ಸಂಗೀತ ಸಂಪ್ರದಾಯದಲ್ಲಿ 'ಸಂಗೀತ ಸಭೆ' ಎನ್ನುವುದು ರೂಢಿಯಲ್ಲಿತ್ತು. 'ಕಛೇರಿ' ಎಂಬುದು ಮುಸಲ್ಮಾನರಿಂದ ಬಂದ ಪದ. ಸಂಗೀತವನ್ನು ಕೇಳಲು ಸೇರಿರುವ ರಸಿಕರೂ, ಪಂಡಿತರೂ ಹಾಗೂ ಸಂಗೀತಗಾರರೂ ನೆರೆದ ಸಭೆಗೆ 'ಸಂಗೀತ ಕಛೇರಿ' ಎನ್ನುವರು. ಕರ್ನಾಟಕ ಸಂಗೀತ ಪದ್ಧತಿಯಲ್ಲಿ ಸಂಗೀತಗಾರರ, ಪಕ್ಕವಾದ್ಯದವರ ಹಾಗೂ ಶ್ರೋತೃಗಳ ಜವಾಬ್ದಾರಿಯೂ ಮುಖ್ಯವಾಗಿರುತ್ತದೆ. ಸಂಗೀತಗಾರರು ನಿಷ್ಠೆಯಿಂದ ತಮ್ಮ ಗಾಯನವನ್ನು ಪ್ರಸ್ತುತಪಡಿಸಬೇಕು. ಶ್ರೋತೃಗಳು ಶಾಂತಿಯಿಂದ ಆಲಿಸಿ, ಗಾಯಕನನ್ನು ಪ್ರೋತ್ಸಾಹಿಸಬೇಕು. ಇದರಿಂದ ಗಾಯಕನಿಗೆ ಹಾಡಲು ಹುಮ್ಮಸ್ಸು, ಏಕಾಗ್ರತೆಗಳು ಮೂಡುತ್ತವೆ. ಉತ್ತಮ ಸಂಗೀತ ರಸಧಾರೆಯನ್ನು ಉಣಬಡಿಸಿದ ಧನ್ಯತೆ ಗಾಯಕನಿಗೆ ಉಂಟಾಗುತ್ತದೆ. ಕೇಳುಗರಿಗೆ ಸಂಗೀತದ ರಸದೌತಣವನ್ನು ಸವಿದ ತೃಪ್ತಿ ನೆಲೆಸುತ್ತದೆ. ಪರಸ್ಪರ ಸಹಕಾರದಿಂದ ನೆರೆದಿದ್ದವರಲ್ಲಿ ಸದ್ಭಾವನೆ ಮೂಡುತ್ತದೆ. ಕಚೇರಿ ಕಳೆಗಟ್ಟುತ್ತದೆ.

ಸಾಮಾನ್ಯವಾಗಿ ಸಂಗೀತ ಸಭೆಗಳು ಮೊದಲು ರಾಜಾಸ್ಥಾನಗಳಲ್ಲಿ, ಮದುವೆ, ಮುಂಜಿ ಮುಂತಾದ ಸಮಾರಂಭಗಳಲ್ಲಿ ಹಾಗೂ ದೇವಾಲಯಗಳಲ್ಲಿ ಜರುಗುತ್ತಿದ್ದವು. ಧಾರ್ಮಿಕ, ಆಧ್ಯಾತ್ಮಿಕ ಸಮಾರಂಭಗಳಲ್ಲಿ ನಡೆಯುತ್ತಿರುವುದರಿಂದ ಸಂಗೀತಕ್ಕೆ ಪವಿತ್ರ ಸ್ಥಾನವಿತ್ತು. ಟಿಕೇಟುಗಳನ್ನು ಹಾಕಿ ಸಂಗೀತ ಕಛೇರಿ, ನಡೆಸುವ ಸಂಪ್ರದಾಯ ಇತ್ತೀಚೆಗೆ ಬಂದಿದೆ.

**Please cite this article as:** ಬಡಿಗೇರ ಮೌನೇಶ್ ಮತ್ತು ಜೋಗಿನಕಟ್ಟೆ ಮಂಜುನಾಥ. (2025). ಆಧುನಿಕ ಸಾಹಿತ್ಯದಲ್ಲಿ ಸಂಗೀತ ಕಛೇರಿಗಳ ವೈಶಿಷ್ಟ್ಯತೆ (ಆಯ್ದ ಕಾದಂಬರಿಗಳನ್ನು ಕುರಿತು). *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್*, 3(6), 5–14

ಸಂಗೀತ ಕಛೇರಿಗಳಲ್ಲಿ ಗಾಯಕನೇ ಪ್ರಧಾನ ಸಂಗೀತಗಾರ. ಪ್ರಧಾನ ವಾದ್ಯಗಾರ ವೀಣೆ, ಕೊಳಲನ್ನು ನುಡಿಸುವವನು. ಪಕ್ಕವಾದ್ಯಗಳಾಗಿ ಪಿಟೀಲು, ಮೃದಂಗ, ಘಟ, ಖಂಜರಿಗಳು ಬಳಸಲ್ಪಡುತ್ತವೆ. ಪ್ರಧಾನ ಸಂಗೀತಗಾರನನ್ನು ಅನುಸರಿಸಿಕೊಂಡು ಸಂಗೀತವು ಸೊಗಸಾಗಿ ಕೇಳುವಂತೆ ಮಾಡಬೇಕಾದುದು ಪಕ್ಕವಾದ್ಯದವರ ಕೆಲಸ. ಪಕ್ಕವಾದ್ಯದವರು ಸಂಗೀತಗಾರನಿಗೆ ಸ್ಫೂರ್ತಿಕೊಟ್ಟು ಕಚೇರಿಗೆ ಕಳೆ ಬರುವಂತೆ ಮಾಡುವುದಾಗಿದೆ. ಕಚೇರಿ ಕಳೆಗಟ್ಟಲು ಗಾಯಕರಂತೆ ಶ್ರೋತೃಗಳು ಮುಖ್ಯ. ಚಿದಾನಂದಮೂರ್ತಿಯವರು ಹೇಳುವಂತೆ "ಸಂಗೀತದಲ್ಲಿ ಒಂದು ಕಡೆ ಗಾಯಕ ಅಥವಾ ಗಾಯಕರು; ಇನ್ನೊಂದೆಡೆ ಶ್ರೋತೃಗಳು: ಇವರಿಬ್ಬರೂ ಸಂಗೀತ ತತ್ವದ ಎರಡು ಮುಖಗಳು (ಸಾಹಿತ್ಯದ ಕವಿ ಸಹೃದಯ ಇದ್ದಂತೆ). ಇವರಿಬ್ಬರ ಸಮ್ಮಿಲನದಿಂದ ಅಥವಾ ಹೃದಯ ಸಂವಾದದಿಂದ ರಸಾನುಭೂತಿಯು ಉಂಟಾಗುತ್ತದೆ, ಹಾಡುವವನಿಗೆ ಮತ್ತು ಕೇಳುವವನಿಗೆ ಇಬ್ಬರಿಗೂ.[1]

ಅ.ನ.ಕೃ. ಅವರ 'ಸಂಧ್ಯಾರಾಗ'ದ ಲಕ್ಷ್ಮಣ ಸಂಗೀತಕ್ಕಾಗಿ ತನ್ನ ಬದುಕನ್ನು ಅರ್ಪಿಸಿದ ಸಂಗೀತಗಾರ. ತನ್ನ ಮೊದಲ ಸಂಗೀತ ಕಛೇರಿ ಅವರ ಮನೆಯಲ್ಲಿಯೇ ತಂಗಿ ಶಾಂತಾಳ ಮದುವೆ ದಿನ ಸಂಜೆ ಅದೇ ಚಪ್ಪರದಲ್ಲಿಯೇ ಏರ್ಪಾಡಾಗುತ್ತದೆ. ಮೊದಲ ಕಛೇರಿ ಸಹಜವಾಗಿ ಕುತೂಹಲ, ಆತಂಕ ಇರುತ್ತದೆ. ತಂದೆ ಶ್ರೀನಿವಾಸರಾಯರ ಸ್ನೇಹಿತರಾದ ಸುಂದರರಾಯರೂ, ಭೀಮರಾಯರೂ ಲಕ್ಷ್ಮಣನ ಸಂಗೀತವನ್ನು ಆಲಿಸಬೇಕೆಂಬ ಒತ್ತಾಸೆಯ ಮೇರೆಗೆ ಕಛೇರಿಯನ್ನು ಹಮ್ಮಿಕೊಳ್ಳುತ್ತಾರೆ. ಗುರು ಅನಂತಾಚಾರ್ಯರಲ್ಲಿ ಸಂಗೀತ ಅಭ್ಯಾಸ ಮಾಡುತ್ತಿದ್ದ ಲಕ್ಷ್ಮಣನ ಸಹಪಾಠಿಗಳಾದ ಪುಟ್ಟಯ್ಯ ಪಿಟೀಲಿಗೂ, ರಂಗಪ್ಪ ಮೃದಂಗಕ್ಕೂ ಸಾಥಿದಾರರಾಗುತ್ತಾರೆ. ಗಾಯಕನ ಗಾಯನ ಸೊಗಸಾಗಿದ್ದರೆ ಪೂರ್ತಿ ಕುಳಿತು ಕೇಳುತ್ತಾರೆ. ಇಲ್ಲವಾದರೆ ತಾಂಬೂಲವನ್ನು ಸ್ವೀಕರಿಸಿ ಎರಡು ಮೂರು ನಿಮಿಷಗಳಲ್ಲಿ ಹೊರಟುಹೋಗುವುದು ಅತಿಥಿಗಳ ಪದ್ಧತಿ. ಲಕ್ಷ್ಮಣ ಭೈರವಿ ವರ್ಣ ಹಾಡಿ ಒಂದೆರಡು ಕೀರ್ತನೆಗಳನ್ನೂ ಹಾಡುತ್ತಾನೆ. ಅತಿಥಿಗಳಿಗೆ ಆ ಸಂಗೀತ ಹಿತವೆನಿಸುತ್ತದೆ. ಯಾರೂ ಅಲ್ಲಿಂದ ಹೊರಡಲಿಲ್ಲ. ಪ್ರಮುಖ ರಾಗಗಳಾದ ಹರಿಕಾಂಬೋದಿ, ಖರಹರಪ್ರಿಯ ರಾಗಗಳನ್ನು ಸೊಗಸಾಗಿ ಹಾಡಿ, ತೋಡಿ ರಾಗವನ್ನು ಆರಂಭಿಸುತ್ತಾನೆ. ತೋಡಿರಾಗವು ಸೌಮ್ಯ, ಸುಂದರ ಮಹಿಳೆಯಂತೆ, ಚಿಂತನಶೀಲ ಮನಸ್ಥಿತಿಯ ಭಾವಾಭಿವ್ಯಕ್ತಿಯ ರಾಗವಾಗಿದೆ. ಒಂದನೆಯ ಕಾಲದಲ್ಲಿ ವಿಸ್ತಾರವಾದ ರಾಗಾಲಾಪನೆ ಮಾಡಿ ಎರಡು ಮೂರನೆಯ ಕಾಲ ಹಾಡಿ ಮುಕ್ತಾಯಗೊಳಿಸುತ್ತಾನೆ. ಕಛೇರಿ ಮುಗಿದ ನಂತರ ಸುಂದರರಾಯರೂ, ಭೀಮರಾಯರೂ ಹಾರ, ತಾಂಬೂಲಗಳನ್ನು ಅರ್ಪಿಸಿ ಸನ್ಮಾನಿಸಿ ಲಕ್ಷ್ಮಣನ ಗಾಯನವನ್ನು ಹೊಗಳುವುದು, ಶಾಮಣ್ಣನವರು ದೊಡ್ಡ ದೊಡ್ಡ ವಿದ್ವಾಂಸರಿಂದ ಸೇವೆಯನ್ನು ಸ್ವೀಕರಿಸಿದ ತಂಬೂರಿಯನ್ನು ಕಾಣಿಕೆಯಾಗಿ ಸಂತಸದಿಂದ ನೀಡುವುದು ಲಕ್ಷ್ಮಣನು ಸಂಗೀತವೆಂಬ ರಸಕಡಲಿನಲ್ಲಿ ಎಲ್ಲರನ್ನೂ ತೇಲಿಸಿದ್ದಕ್ಕಾಗಿ, ಆತನ ಸಂಗೀತ ವಿದ್ವತ್ತಿಗಾಗಿಯೇ.

ಇನ್ನೊಮ್ಮೆ ಲಕ್ಷ್ಮಣ ಬೆಂಗಳೂರಿನಿಂದ ತಮ್ಮೂರಿಗೆ ವಾಪಸ್ಸು ಬಂದ ವಿಷಯ ತಿಳಿದ ಜನ ಭಜನ ಮನೆಯಲ್ಲಿಯೇ ಅವನ ಸಂಗೀತ ಕಛೇರಿ ಹಮ್ಮಿಕೊಳ್ಳುತ್ತಾರೆ. ಲಕ್ಷ್ಮಣನ ಮನೆಯವರು ಹಾಗೂ ಇಡೀ ಊರೆ ಅಲ್ಲಿ ಸೇರುತ್ತಾರೆ. ಹಳ್ಳಿಗಳಲ್ಲಿ ನಡೆಯುವ ಸಂಗೀತ ಕಛೇರಿ ಅರಮನೆ ಹಾಗೂ ಅಕಾಡೆಮಿಗಳ ಸಂಗೀತ ಕಛೇರಿಗಳಿಗಿಂತ ಭಿನ್ನವಾಗಿರುತ್ತವೆ. ಹಳ್ಳಿಗಳಲ್ಲಿ ದೇವಸ್ಥಾನಗಳಲ್ಲಿ, ಭಜನಾ ಮಂದಿರಗಳಲ್ಲಿ ಚಪ್ಪರ ಹಾಕಿ ಹೂಗಳಿಂದ ಅಲಂಕಾರ ಮಾಡಿ ಊರಿಗೆ ಊರೆ ಅಲ್ಲಿ ನೆರೆದಿರುತ್ತದೆ.

ಲಕ್ಷ್ಮಣನ ಕಛೇರಿ 'ವಾತಾಪಿ ಗಣಪತಿಂ ಭಜೇ' ಕರ್ನಾಟಕ ಸಂಗೀತದ ದಿಗ್ಗಜ ಮುತ್ತುಸ್ವಾಮಿ

ದೀಕ್ಷಿತರು ಸಂಯೋಜಿಸಿದ ಗೀತೆಯೊಂದಿಗೆ ಪ್ರಾರಂಭವಾಗುತ್ತದೆ. ಪಕ್ಕವಾದ್ಯಗಾರರಾದ ಪಿಟೀಲು ನುಡಿಸುತ್ತಿದ್ದ ರಾಮಸ್ವಾಮಿ, ಮೃದಂಗ ನುಡಿಸುತ್ತಿದ್ದ ವೆಂಕಟಶಾಮಿಯರು ಲಕ್ಷ್ಮಣನಿಗೆ ಸರಿಯಾಗಿ ಸಾಥ್ ಕೊಡಲು ಸಾಧ್ಯವಾಗಲಿಲ್ಲ. ರಾಮಸ್ವಾಮಿ ಕೈಸೋತು ಪಿಟೀಲು ಕೆಳಗಿಟ್ಟು ಕುಳಿತುಕೊಳ್ಳುತ್ತಾನೆ. ವೆಂಕಟಶಾಮಿ ಲಕ್ಷ್ಮಣನ ಜೊತೆ ಟೀಕಗಳನ್ನು ಹಾಕುವ ಪ್ರಯತ್ನ ಮಾಡುತ್ತಾನೆ. ಅಂದರೆ ಲಕ್ಷ್ಮಣನ ಸಂಗೀತ ಗಾಯನ ಸ್ಪಷ್ಟವಾಗಿ ರಸರಾಗಗಳ ಓಘ ವೇಗವಾಗಿತ್ತು. ಆದ್ದರಿಂದ ಪಕ್ಕವಾದ್ಯ ನುಡಿಸುವವರು ಸರಿಯಾಗಿ ಸಾಥ್ ನೀಡಲಾರದೆ ಸುಮ್ಮನಾಗುತ್ತಾರೆ. ಅನುಸರಿಸಿಕೊಂಡು ಸಾವಕಾಶವಾಗಿ ಹೋಗಿರಿ ಎಂದು ಲಕ್ಷ್ಮಣ ಸೂಚನೆ ನೀಡಿದರೂ ಅವರಿಗೆ ಸಾಧ್ಯವಾಗಲಿಲ್ಲ. ಹಾಗಾಗಿ ನಾಲ್ಕು ಕೀರ್ತನೆ ಹಾಡಿ ಒಂದೆರಡು ದೇವರ ನಾಮಗಳನ್ನು ಹಾಡಿ ನಂತರ ಮಂಗಳ ಹಾಡಿ ಕಛೇರಿ ಮುಕ್ತಾಯಗೊಳಿಸುತ್ತಾನೆ. ತಾಯಿ ಮೀನಾಕ್ಷಮ್ಮ ಹರಸುತ್ತಾರೆ. ನೆರೆದ ಸಭಿಕರು ನಾನಾ ರೀತಿ ಹೊಗಳುತ್ತಾರೆ. ಅಮಲ್ದಾರರು ಮೆಚ್ಚಿ ಲಕ್ಷ್ಮಣನ ಮುಂದಿನ ಉಜ್ವಲ ಸಂಗೀತ ಭವಿಷ್ಯವನ್ನು ನುಡಿಯುತ್ತಾರೆ. ಎಲ್ಲ ಹೊಗಳಿಕೆಯ ನುಡಿಗಳನ್ನೂ ಲೆಕ್ಕಿಸದೆ ಅವನ ಲಕ್ಷ್ಯವೆಲ್ಲಾ ಚೆನ್ನಪ್ಪನ ಮೇಲೆ. ಚೆನ್ನಪ್ಪ ಅವನ ಮೊದಲ ಗುರು. ಗುರು ಶಿಷ್ಯನ ಸಂಗೀತ ಕೇಳಿ ಹೊಗಳಿ ಆಶೀರ್ವದಿಸಬೇಕಿತ್ತು ಎಂಬ ಆಸೆ ಲಕ್ಷ್ಮಣನಲ್ಲಿತ್ತು. ತಾನು ಮೊದಲು ಹಾಡಿದ ಅದೇ ಭಜನೆಯ ಮನೆ, ತಾನು ಹಾಗೂ ಚೆನ್ನಪ್ಪನವರು ಹಾಡಿದುದು– ಜನರ ಹೊಗಳಿಕೆಯನ್ನೆಲ್ಲಾ ಚೆನ್ನಪ್ಪನವರಿಗೆ ಅರ್ಪಿಸುತ್ತಾನೆ. ತನಗೆ ಸಂಗೀತದ ಬಗ್ಗೆ ಗಂಭೀರ ಆಸಕ್ತಿ ಬಂದುದು, ತನ್ನ ಗಾಯನವನ್ನು ಮೊದಲು ಹೊಗಳಿದುದು ಮಹಾನ್ ಸಂಗೀತ ವಿದ್ವಾಂಸ ಚೆನ್ನಪ್ಪನವರು. ಅವರು ಅಂದು ಹಾಡಿದ ಪೂರ್ವಿರಾಗ ಅವನನ್ನು ಬಹುವಾಗಿ ಕಾಡುತ್ತವೆ. ಅದಕ್ಕಾಗಿ ಅವರಿಗೇ ಅರ್ಪಿಸಿದುದರಲ್ಲಿ ಅರ್ಥವಿದೆ. ನೆರೆದಿದ್ದವರೆಲ್ಲ ತನ್ನ ಸಂಗೀತವನ್ನು ಮೆಚ್ಚಿದರೂ ತನಗೆ ಮಾತ್ರ ಮೆಚ್ಚಿಗೆಯಾಗಲಿಲ್ಲ.

"ಇಲ್ಲ; ಇದು ಸಂಗೀತವಲ್ಲ. 'ಸರಿಗಮಪದನಿಸ'ಗಳ ಹೋರಾಟ–ಸುಖವಾದ 'ಶಾರೀರ'ದ ಸಮ್ಮೋಹನಾಸ್ತ್ರ. ಒಂದು ದಿವಸ ನಿಜವಾದ ಸಂಗೀತವನ್ನು ಹಾಡಬೇಕು."[2]

ಅನಕೃ ಅವರ 'ಕಟ್ಟಿದ ಬಣ್ಣ' ಕಾದಂಬರಿಯಲ್ಲಿ ದಕ್ಷಿಣಾಮೂರ್ತಿಶಾಸ್ತ್ರಿಗಳ ಮದರಾಸು ಸಂಗೀತ ಅಕಾಡೆಮಿ ಕಛೇರಿ ಅನೇಕ ಮಹತ್ವಪೂರ್ಣ ವಿಚಾರಗಳನ್ನು ತಿಳಿಸುತ್ತದೆ. ಒಂದೊಂದು ಸಂಗೀತ ಪದ್ಧತಿ, ಪ್ರದೇಶಕ್ಕನುಗುಣವಾಗಿ ಅಲ್ಲಿನ ರೀತಿ, ನೀತಿ, ನಿಯಮಗಳಿರುತ್ತವೆ. ಇಲ್ಲಿ ಮೊದಲಿಗೆ ಕಛೇರಿಯ ಆರಂಭೋತ್ಸವ, ಭಾಷಣ, ವಿಚಾರ ವಿನಿಮಯ ಸಭೆ, ನಂತರ ಕಛೇರಿಗಳು ಏರ್ಪಡುತ್ತವೆ. ಮದರಾಸು ಸಂಗೀತ ಅಕಾಡೆಮಿ ಕಚೇರಿಯಲ್ಲಿ 'ವಿಚಾರ ವಿನಿಮಯ ಸಭೆ'ಯಲ್ಲಿ ದಕ್ಷಿಣಾಮೂರ್ತಿಶಾಸ್ತ್ರಿಗಳು ಹಾಗೂ ಅಲ್ಲಿನ ವಿವಿಧ ಸಂಗೀತ ವಿದ್ವಾಂಸರು ಭಾಗವಹಿಸಿದ್ದರು. ಇಂತಹ ಸಭೆಗಳಲ್ಲಿ ರಾಗದ ಮಾಹಿತಿ, ಅದರ ವಿಸ್ತಾರ, ಆಲಾಪನೆ ವಾಗ್ಗೇಯಕಾರರು ಅವುಗಳನ್ನು ನಿರೂಪಿಸಿದ ಬಗೆ ಮುಂತಾದವುಗಳ ಕುರಿತು ಚರ್ಚೆಗಳು ನಡೆಯುತ್ತವೆ. ಈ ಸಭೆಯಲ್ಲಿ ಕೇದಾರಗೌಳ ರಾಗ ಲಕ್ಷಣ, ಅದರ ವಿವಿಧ ಪ್ರಕಾರಗಳು –ವಾಗ್ಗೇಯಕಾರರು ಅದನ್ನು ವಿಸ್ತರಿಸಿದ ರೀತಿಯನ್ನು ಕುರಿತು ಅಲ್ಲಿನ ಸಂಗೀತ ವಿದ್ವಾಂಸರಾದ ಮಹಾರಾಜಪುರಂ ವಿಶ್ವನಾಥ ಅಯ್ಯರ್, ಸರಸ್ವತೀ ಬಾಯಿ ನಾಯನಾ ಪಿಳ್ಳೈ, ರಾಮಭಾಗವತರು, ಅರಿಯಾಕುಡಿ ರಾಮಾನುಜ ಅಯ್ಯಂಗಾರ್, ಪಲ್ಲಡಂ ಸಂಜೀವರಾವ್ ಮುಂತಾದವರು ವಿವರಿಸುತ್ತಾರೆ. ದಕ್ಷಿಣಾಮೂರ್ತಿಶಾಸ್ತ್ರಿಗಳು ತಮ್ಮ ಸರದಿ ಬಂದಾಗ ಮೈಸೂರು ಸಂಗೀತ ಪದ್ಧತಿಯಲ್ಲೂ ಬಳಕೆಯಲ್ಲಿರುವ ಕೇದಾರಗೌಳ ರಾಗ ಲಕ್ಷಣವನ್ನು ಸ್ಥೂಲವಾಗಿ ವಿವರಿಸಿ ದಕ್ಷಿಣಾದಿ ಪದ್ಧತಿ– ಮೈಸೂರು ಪದ್ಧತಿಗಳೆರಡನ್ನೂ ಹಾಡಿ ತೋರಿಸಿ ಅಲ್ಲಿ

ನೆರೆದಿದ್ದವರ ಗಮನ ಸೆಳೆಯುತ್ತಾರೆ. ಮದರಾಸು ಮತ್ತು ಮೈಸೂರು ಸಂಗೀತಗಾರರಲ್ಲಿ ಈರ್ಷೆ, ಮತ್ಸರಗಳು ಮೊದಲಿನಿಂದಲೂ ಇತ್ತು. ತಮ್ಮ ಸಂಗೀತ ಪದ್ಧತಿ, ತಮ್ಮ ವಿದ್ವಾಂಸರು ಶ್ರೇಷ್ಠ ಎಂದು ಅಹಂಕಾರ ಪಡುವವರೂ ಇದ್ದರು. ಅದರಲ್ಲೂ ಕೆಲವು ಮದರಾಸು ಸಂಗೀತಗಾರರಲ್ಲಿ ಮೈಸೂರು ಸಂಗೀತಗಾರರು ದಡ್ಡರು ಎಂಬ ಮನೋಭಾವ ಇತ್ತು. ಶಾಸ್ತ್ರಿಗಳು ನೀಡಿದ ರಾಗದ ಸ್ಥೂಲ ಪರಿಚಯ, ಲಕ್ಷಣಗಳ ವಿವರಣೆ ಮತ್ತು ಗಾಯನದಿಂದ ಸ್ಪಷ್ಟ ಪರಿಚಯ ಮಾಡಿಕೊಡುತ್ತಾರೆ. ಕೇದಾರಗೌಳ ರಾಗ ಕರ್ನಾಟಕ ಸಂಗೀತದಲ್ಲಿ ಮುಖ್ಯವಾದ ರಾಗ. ಇದು ಹರಿಕಾಂಬೋಜಿಯಿಂದ ಜನ್ಯರಾಗ. ಬೆಳಗಿನ ಸಂದರ್ಭದಲ್ಲಿ ಹಾಡುವ ರಾಗವಾಗಿದೆ.

ಸಭಾಧ್ಯಕ್ಷರಾಗಿದ್ದ ಟೈಗರ್ ವರದಾಚಾರ್ಯರು ಮೈಸೂರು ಸಂಗೀತ, ಅಲ್ಲಿನ ಸಂಗೀತ ವಿದ್ವಾಂಸರ ವಿದ್ವತ್ತನ್ನು ಅರಿತವರು. ಜೊತೆಗೆ ಮಹಾನ್ ಸಂಗೀತ ವಿದ್ವಾಂಸರೂ ಅವರ ಗೆಳೆಯರಾಗಿದ್ದರು ಎಂಬುದನ್ನು ಶಾಸ್ತ್ರಿಗಳಿಗೆ ಅವರು ಹೇಳುವ ಮಾತಿನಲ್ಲಿ ತಿಳಿಯುತ್ತದೆ. "ತಾವು ದೊಡ್ಡವರು. ಸಣ್ಣವರ ಮಾತುಗಳನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಡಿ. ಮೈಸೂರಿನ ಯೋಗ್ಯತೆ ನಾನು ಬಲ್ಲೆ. ನಿಮ್ಮ ಕರಗಿರಿಯಾಚಾರ್ಯರು, ಗಿರಿಭಟ್ಟರ ತಮ್ಮಯ್ಯನವರು, ವೀಣೆ ವೆಂಕಟಸುಬ್ಬಯ್ಯನವರು ಎಲ್ಲರೂ ನನ್ನ ಸ್ನೇಹಿತರು. ಸಂಜೆಗೆ ತಾವು ಅದ್ಭುತವಾಗಿ ಹಾಡಿ ನಮ್ಮೆಲ್ಲರನ್ನೂ ಸಂತೋಷಗೊಳಿಸಬೇಕು."[3]

ಸಂಗೀತ ಕಚೇರಿಗಳಲ್ಲಿ ಒಮ್ಮೊಮ್ಮೆ ಸ್ಥಳೀಯ ವಾದ್ಯ ಕಲಾವಿದರನ್ನು ಬಳಸಿಕೊಳ್ಳುವುದುಂಟು. ಇದರಿಂದ ತಮ್ಮ ಕಲಾವಿದರ ಪರಿಚಯ ಮತ್ತು ಪ್ರತಿಭೆ ನೆರೆದಿದ್ದ ಸಭಾಸದರಿಗೆ, ಶ್ರೋತೃಗಳಿಗೆ ಆಗುತ್ತದೆ. ಆರಂಭದಲ್ಲಿ ವಿದ್ವಾಂಸರ, ವಾದ್ಯಗಾರರ ಪರಿಚಯ ಮಾಡುತ್ತಾರೆ. ಶಾಸ್ತ್ರಿಯವರ ಮದರಾಸು ಕಛೇರಿಯಲ್ಲಿ ಪಿಟೀಲಿನಲ್ಲಿ ವಿದ್ವಾಂಸರಾದ ಗೋವಿಂದಸ್ವಾಮಿ, ಅಲಗನಂಬಿ ಪಿಳ್ಳೆಯವರು ಪಕ್ಕವಾದ್ಯ ನುಡಿಸುವರೆಂದು ಗೊತ್ತಾಯಿತು. ಒಂದು ತಂಬೂರಿಯನ್ನು ಸುಬ್ರಹ್ಮಣ್ಯನೂ ಇನ್ನೊಂದು ತಂಬೂರಿಯನ್ನು ಮೀಟುತ್ತ ಶಿಷ್ಯೆ ಭಾಗ್ಯ ಹಾಡುವುದೆಂದು ಸೂಚನೆಯಾಯಿತು. ತಮ್ಮ ಗಾಯನದ ಆವರ್ತದಲ್ಲಿ ಮಧ್ಯಮ ಕಾಲದಲ್ಲಿ ಭಾಗ್ಯಳಿಗೆ ಹಾಡಲು ಅವಕಾಶ ನೀಡುತ್ತಿದ್ದರು. ಇದರಿಂದ ಹೊಸದಾಗಿ ಕಛೇರಿಯಲ್ಲಿ ಹಾಡುವವರಿಗೆ ಧೈರ್ಯ ಬರುವುದರ ಜೊತೆಗೆ ಸಭಿಕರಿಗೆ ಅವರ ಪರಿಚಯವಾಗುತ್ತದೆ. ಶಾಸ್ತ್ರಿಗಳು ಭಾಗ್ಯಳನ್ನು ಕರೆದುಕೊಂಡು ಬಂದ ಉದ್ದೇಶವೂ ಅವಳನ್ನು ಪರಿಚಯಿಸುವುದಾಗಿತ್ತು. ಆರಂಭದಲ್ಲಿ ಗಣಪತಿಯನ್ನು ಸ್ತುತಿಸಿ ಶಂಕರಾಭರಣ ರಾಗ ಪ್ರಾರಂಭಿಸಿದಾಗ ವಿಳಂಬ ಕಾಲದಲ್ಲಿ ಪಿಟೀಲ್ ವಿದ್ವಾಂಸ ಗೋವಿಂದಸ್ವಾಮಿ ಕೇವಲ ಶ್ರುತಿ ತುಂಬುತ್ತಿದ್ದುದು ಶಾಸ್ತ್ರಿಯವರ ಘನ ಪಾಂಡಿತ್ಯವನ್ನು ಎತ್ತಿ ತೋರಿಸುತ್ತದೆ. ಇದು ಮದರಾಸು ಅಭಿಮಾನಿಗಳಲ್ಲಿ ಭಯವನ್ನು ತರುತ್ತದೆ. ಶಾಸ್ತ್ರಿಗಳು ಹಾಡಿದ ಶಂಕರಾಭರಣ, ತೋಡಿರಾಗಗಳು ಕರ್ನಾಟಕ ಸಂಗೀತದ ಘನರಾಗಗಳು.

ದೇವರನಾಮಗಳನ್ನು ಹಾಡುವುದಕ್ಕೂ ಮುಂಚೆ ಶಾಸ್ತ್ರಿಗಳು ಭಾಗ್ಯಳಿಂದ 'ಮೋಕ್ಷಮುಗಲದಾ' ಎಂಬ ತ್ಯಾಗರಾಜರ ಸಾರಮತಿ ರಾಗದ ಕೀರ್ತನೆಯನ್ನು ಹಾಡಲು ತಿಳಿಸುತ್ತಾರೆ. ದೇವರನಾಮಗಳನ್ನು ಹಾಡಲು ಶಾಸ್ತ್ರಿಗಳು ಸಿದ್ಧರಾಗುತ್ತಿದ್ದಂತೆ ಸಭಿಕರ ಒತ್ತಾಯದ ಮೇರೆಗೆ ಕಲ್ಯಾಣಿರಾಗ, ಶಹನಾರಾಗದ ಗೀತೆಗಳನ್ನು ಹಾಡಲು ಕೋರಿಕೆ ಬರುತ್ತದೆ. ಸಂಗೀತ ಕಚೇರಿಗಳಲ್ಲಿ ಸಂಗೀತ ಬಲ್ಲ ಅನೇಕರೇ ಸಭಿಕರಾಗಿದ್ದಲ್ಲಿ ಗಾಯಕನಿಗೆ ಹೀಗೆ ಕೋರಿಕೆಯನ್ನು ಸಲ್ಲಿಸುತ್ತಾರೆ. ಕಲ್ಯಾಣಿ ರಾಗದಲ್ಲಿ ಕನಕದಾಸರ 'ನೀ ಮಾಯೆಯೊಳಗೋ ನಿನ್ನೊಳು ಮಾಯೆಯೋ' ಶಹನಾರಾಗದಲ್ಲಿ ಪುರಂದರದಾಸರು ರಚಿಸಿ 'ಇನ್ನೂ ದಯಬಾರದೆ' ಕೀರ್ತನೆಯನ್ನು ಹಾಡುತ್ತಾರೆ. ಅನೇಕ ದೇವರನಾಮಗಳನ್ನು ಹಾಡಿದರೂ ಕೇಳುಗರ ದಾಹ ತೀರದಾಗುತ್ತದೆ. ಸಂಗೀತದ ಮೋಡಿಯೇ ಅಂತಹದ್ದು. ಸಮಯ, ಸಂದರ್ಭ, ಸ್ಥಳಗಳನ್ನು

ಮರೆಸಿ ಬೇರೊಂದು ಲೋಕಕ್ಕೆ ಕೊಂಡೊಯ್ಯುವ ಅಪೂರ್ವ ಅನುಭೂತಿ. ಕೊನೆಗೆ ಮಂಗಳ ಹಾಡಿ ಕಚೇರಿ ಮುಗಿಸಿದರೂ ಸಭಿಕರ ಕರತಾಡನ, ವಿದ್ವಾಂಸರ ಪ್ರಶಂಸೆಗಳು ಶಾಸ್ತ್ರಿಗಳು ಹಾಗೂ ಅವರ ಪರಿವಾರಕ್ಕೆ ಮಹದಾನಂದವನ್ನುಂಟು ಮಾಡುತ್ತವೆ. ಅದರಲ್ಲೂ ಅಧ್ಯಕ್ಷತೆ ವಹಿಸಿದ್ದ ವರದಾಚಾರ್ಯರು ಶಾಸ್ತ್ರಿಗಳ ಸಂಗೀತ ಸವಿಯುತ್ತಲೇ ಆನಂದಬಾಷ್ಪಗಳು ತುಂಬಿ ಬರುತ್ತವೆ. ಕೊನೆಯಲ್ಲಿ ಅವರಾಡಿದ ಮಾತುಗಳು ಮೈಸೂರು ಸಂಗೀತ ಪದ್ಧತಿ, ಮದರಾಸು ಸಂಗೀತ ಪದ್ಧತಿಗೆ ಶಾಸ್ತ್ರಿಗಳು ಸೇತುವೆ ಕಟ್ಟಿದ್ದಾರೆಂಬ ಅರ್ಥಪೂರ್ಣ ಮಾತುಗಳು ಹಾಗೂ ಶಾಸ್ತ್ರೀಯ ಸಂಗೀತ ಹಾಡುವ ಕ್ರಮದ ಬಗ್ಗೆ ಮಹತ್ವಪೂರ್ಣ ಮಾತುಗಳನ್ನಾಡುತ್ತಾರೆ.

"ನಾವು ಇಂದು ಘನವಾದ ಸಂಗೀತ ಕೇಳಿದ್ದೇವೆನ್ನುವುದರಲ್ಲಿ ಸಂದೇಹವಿಲ್ಲ. ಸಂಗೀತ ಕಲೆಯೂ ಹೌದು; ಶಾಸ್ತ್ರವೂ ಹೌದು. ಕಲಾಭಾಗವನ್ನು ಮೈಸೂರಿನವರು ಬೆಳೆಸಿದ್ದಾರೆ; ಶಾಸ್ತ್ರಭಾಗವನ್ನು ನಾವು ಬೆಳೆಸಿದ್ದೇವೆ. ದಕ್ಷಿಣಾಮೂರ್ತಿಶಾಸ್ತ್ರಿಗಳು ಎರಡಕ್ಕೂ ಸೇತುವೆ ಕಟ್ಟಿದ್ದಾರೆ. ಶಾಸ್ತ್ರದ ಅವಲೋಹಕ್ಕೆ ಕಲೆಯ ಪರುಷಮಣಿಯ ಸ್ಪರ್ಶ ಮಾಡಿಸಿ ದಿವ್ಯ ರಸಪಾಕ ಸಿದ್ಧಗೊಳಿಸಿದ್ದಾರೆ.

ಇಂದು ಜನತೆಯ ಅಭಿರುಚಿಗೆ ಹೊಂದಿಕೊಂಡು ಹಾಡುವವರೇ ಹೆಚ್ಚಾಗಿದ್ದಾರೆ. ಇದರಿಂದಾಗಿ ಅನವಶ್ಯಕ ಸ್ವರಸಂಯೋಜನೆ, ಲಯವಿನ್ಯಾಸ ಕಂಡುಬರುತ್ತದೆ. ಉತ್ತಮ ಕಲೆಯ ಬಗ್ಗೆ ಲೋಕಾಭಿರುಚಿ ಹುಟ್ಟಿಸುವುದೇ ಕಲಾವಿದನ ಕರ್ತವ್ಯವಲ್ಲದೆ, ಲೋಗರ ಅಪರಿಷ್ಕೃತ ಅಭಿರುಚಿಯನ್ನು ಪೋಷಿಸುವುದಲ್ಲ.

ಶಾಸ್ತ್ರಿಗಳು ಯಾರನ್ನೂ ಮೆಚ್ಚಿಸಲೆತ್ನಿಸಲಿಲ್ಲ. ಆತ್ಮತೃಪ್ತ್ಯರ್ಥವಾಗಿ, ಭಗವದ್ಪ್ರೀತಿಯಾಗುವಂತೆ ಹಾಡಿದರು. ಆದುದರಿಂದಲೇ ನಮ್ಮ ಸಂತೋಷ ಅತ್ಯಧಿಕವಾಯಿತು.

ಶಾಸ್ತ್ರಿಗಳು ಹಾಡುವ ಕ್ರಮದ ಬಗ್ಗೆ ಒಂದು ಮಾತು ಹೇಳಲಿಚ್ಛಿಸುತ್ತೇನೆ. ಮೂರು ಗಂಟೆ ಕಛೇರಿಯಲ್ಲಿ ಮೂವತ್ತು ರಾಗಗಳನ್ನು ತುಂಡು ತುಂಡಾಗಿ ಹಾಡುವ ಪದ್ಧತಿ ಬಳಕೆಗೆ ಬಂದಿದೆ. ಇದು ಸಂಪ್ರದಾಯವಲ್ಲ. ನಾಲ್ಕೇ ರಾಗ ಹಾಡಿದರೂ ತುಂಬಿ ಹಾಡಬೇಕು. ಅವು ಶ್ರಾವಕನ ಮನಸ್ಸಿನ ಮೇಲೆ ಚಿರಸ್ಥಾಯಿಯಾದ ಪರಿಣಾಮವನ್ನುಂಟು ಮಾಡಬೇಕು. ಶಾಸ್ತ್ರಿಗಳು ಮೇಲ್ಪಂಕ್ತಿ ಹಾಕಿಕೊಟ್ಟು ನಮಗೆ ಉಪಕಾರ ಮಾಡಿದ್ದಾರೆ.

ಅವರು ರಾಗಗಳನ್ನು ಹಾಡುತ್ತಿದ್ದಾಗ ಹೂ ಅರಳಿದಂತೆ ಭಾಸವಾಗುತ್ತಿತ್ತು. ಇದೇ ರಾಗ ಹಾಡುವ ಸರಿಯಾದ ಕ್ರಮ. ಮನೆ ಕಟ್ಟುವಾಗ ನಾವು ಅಸ್ತಿಭಾರ ಹಾಕಿಕೊಂಡು, ಇಟ್ಟಿಗೆಗಳ ಮೇಲೆ ಇಟ್ಟಿಗೆ ಪೇರಿಸಿ, ಕೊನೆಯಲ್ಲಿ ಚಾವಣಿ ಹೊದೆಸುತ್ತೇವೋ ಹಾಗೆ ರಾಗ ಮಂದಿರವನ್ನೂ ಕಟ್ಟಬೇಕು. ತಾತ್ಕಾಲಿಕ ಪರಿಣಾಮವನ್ನುಂಟು ಮಾಡಲು ಎಲ್ಲಿಯೋ ಎತ್ತಿಕೊಂಡು ಎಲ್ಲಿಯೋ ನಿಲ್ಲಿಸಬಾರದು.

ಶಾಸ್ತ್ರಿಗಳು ಮೇಲಿಂದ ಮೇಲೆ ಮದರಾಸಿಗೆ ಬಂದು ನಮಗೆ ಅಭಿಜಾತ ಸಂಗೀತದ ಹೆಚ್ಚಿನ ಪರಿಚಯ ಮಾಡಿಕೊಡಬೇಕು. ಮುಂದಿನ ವರ್ಷ ಅಕಾಡೆಮಿಯ ವಾರ್ಷಿಕಾಧಿವೇಶನದ ಅಧ್ಯಕ್ಷ ಸ್ಥಾನ ಅವರೇ ಅಲಂಕರಿಸಬೇಕೆಂದು ನಾನು ಸೂಚಿಸುತ್ತೇನೆ."[4]

ಲಲಿತಾಂಗಿ ದಕ್ಷಿಣಾಮೂರ್ತಿಶಾಸ್ತ್ರಿಗಳನ್ನು ಮನೆಗೆ ತಾಂಬೂಲ ಸ್ವೀಕರಿಸಿ ತಾವು ಹಾಡಬೇಕೆಂದು ಆಹ್ವಾನವಿತ್ತಾಗ ಶಾಸ್ತ್ರಿಗಳು ಆಯಾಸವಾದುದರಿಂದಲೋ, ಮುಂದೆ ಇನ್ನೂ ಸಾಕಷ್ಟು ಕಛೇರಿಗಳಿವೆ ಎಂತಲೋ, ಭಾಗ್ಯಳನ್ನು ಮದರಾಸು ಸಂಗೀತ ಪ್ರಪಂಚಕ್ಕೆ ಪರಿಚಯಿಸಬೇಕೆಂದು ಇಂದು ನನ್ನ ಶಿಷ್ಯೆ ಹಾಡುತ್ತಾಳೆಂದು ಹೇಳುತ್ತಾರೆ. ಆರಂಭದಲ್ಲಿ ಭಾಗ್ಯ ಹಾಡಲು ಹಿಂದೇಟು ಹಾಕಿದರೂ ಶಾಸ್ತ್ರಿಗಳು, ಹೊನ್ನೂರಪ್ಪನ ಪ್ರೋತ್ಸಾಹದಿಂದ ಹಾಡಲು ಶುರುವಿಟ್ಟಳು. ಇದು ಅವಳ ಮೊದಲ ವೇದಿಕೆ

ಕಾರ್ಯಕ್ರಮ. ಮೊದಲ ಸಂಗೀತ ಕಛೇರಿ ಮೈಸೂರಿನಲ್ಲೆ ಆಗಬೇಕೆಂದು ಶಾಸ್ತ್ರಿಗಳ ಯೋಜನೆಯಾಗಿತ್ತು. ಇದು ಅನಿವಾರ್ಯಕ್ಕೆ ಒದಗಿ ಬಂದ ಅವಕಾಶ. 'ವಾತಾಪಿ ಗಣಪತಿಂ ಭಜೆ' ಎಂಬ ಮುತ್ತುಸ್ವಾಮಿ ದೀಕ್ಷಿತರ ಗೀತೆಯನ್ನು ಹಾಡುವಾಗ ಅವಳ ಧ್ವನಿ ಕಂಪಿಸುತ್ತದೆ. ಮೊದಲ ಸಲ ವೇದಿಕೆ ಮೇಲೆ ಹಾಡುವಾಗ ಸ್ವರ ಕಂಪಿಸುವುದು ಸಾಮಾನ್ಯ. ಎಷ್ಟೇ ದೃಢವಾಗಿ ಸಂಗೀತ ಅಭ್ಯಾಸ ಮಾಡಿದ್ದರೂ ಮೊದಲ ಕಚೇರಿಯಾದ್ದರಿಂದ ಆರಂಭದಲ್ಲಿ ಕಂಪನವಿತ್ತು. ಶಾಸ್ತ್ರಿಗಳು ಪ್ರಸನ್ನ ವದನರಾದದ್ದನ್ನು ಕಂಡು ಧೈರ್ಯ ತಂದುಕೊಂಡು ಭೈರವಿ ರಾಗಾಲಾಪನೆ ಮಾಡುತ್ತಾಳೆ. ಕರ್ನಾಟಕ ಸಂಗೀತದ ಸಂಪೂರ್ಣ ರಾಗವಾದ ಭೈರವಿಯು ಒಂದು ಜನ್ಯರಾಗವಾಗಿದೆ. ಇಂತಹ ರಾಗವನ್ನು ಹಾಡಿದ್ದನ್ನು ಕಂಡ ವಿದ್ವಾಂಸರು 'ಶಹಭಾಸ್' ಎಂದು ಪ್ರೋತ್ಸಾಹಿಸಿದರು. ಅವಳಲ್ಲಿ ಮನೆಮಾಡಿದ್ದ ಭಯ ಪೂರ್ತಿ ಹೊರಟುಹೋಯಿತು.

ನಂತರ ಹಾಡಿದ ಮೋಹನ, ಧನ್ಯಾಸಿ, ಕಾಂಬೋಜಿರಾಗದ ಕೀರ್ತನೆಗಳು, ದೇವರನಾಮಗಳು ಸಭಾಸದರನ್ನು ಸಂಗೀತಸಾಗರದಲ್ಲಿ ಮುಳುಗೇಳುವಂತೆ ಮಾಡುತ್ತದೆ. ನಂತರ ಮಹಾರಾಜಪುರಂ ವಿಶ್ವನಾಥ ಅಯ್ಯರ್ ಅವರ ಒತ್ತಾಯದ ಮೇರೆಗೆ ಹಾಡಲೊಪ್ಪಿದ ಶಾಸ್ತ್ರಿಯವರು ಹೆಚ್ಚು ಬಳಕೆಯಲ್ಲಿಲ್ಲದ ರಾಗ ರವಿಚಂದ್ರಿಕೆಯನ್ನು ಆರಂಭಿಸಿದಾಗ ನೆರೆದಿದ್ದ ಶ್ರೋತೃಗಳು ರಸಕಡಲಿನಲ್ಲಿ ಧುಮುಕಿದಂತಾಯಿತು. ವಿಸ್ತಾರವಾಗಿ ರಾಗಗಳನ್ನು ಹಾಡಿ ದೇವರನಾಮಗಳನ್ನು ಹಾಡಿದಾಗ ನೆರೆದಿದ್ದವರೆಲ್ಲ ಮೈಮರೆಯುತ್ತಾರೆ. ಅವರು ಆಡಿದ ಗಮಕ, ನೆರೆವಲಿಗೂ ಎಲ್ಲರೂ 'ಶಹಭಾಸ್' ಎನ್ನುತ್ತಾರೆ. 'ಗಮಕ' ಎಂದರೆ "ಒಂದು ಸ್ವರಕ್ಕೂ ಮತ್ತೊಂದು ಸ್ವರಕ್ಕೂ ಇರುವ ಅಂತರವನ್ನು ಅವೆರಡೂ ಸ್ವರಗಳ ಛಾಯೆಯಿಂದ ಹೊಂದಿಸುವುದು."[5]

ಶಾಸ್ತ್ರಿಗಳ ಗಾಯನ ಮುಕ್ತಾಯವಾದ ನಂತರ ಅಕ್ಷರಶಃ ನೆರೆದಿದ್ದ ಕಲಾರಸಿಕರು, ವಿದ್ವಾಂಸರು ಮೂಕವಿಸ್ಮಿತರಾಗುತ್ತಾರೆ. ಭಾಗ್ಯಳ ಗಾಯನಕ್ಕೂ ತಲೆದೂಗುತ್ತಾರೆ. ಸಂಜೀವರಾಯರ ಮಾತುಗಳಲ್ಲಿ ಅದು ಕಾಣುತ್ತದೆ. "ಶಿಷ್ಯಳೇ ಘನವಾಗಿ ಹಾಡುವಾಗ ಗುರುಗಳು ಹಾಡುವುದರಲ್ಲಿ ಅತಿಶಯವೇನು? ನಿಮ್ಮ ಶಿಷ್ಯಳ ಹಾಡಿಕೆ ನನಗೆ ಪರಮಾನಂದವನ್ನುಂಟುಮಾಡಿದೆ. ಕೊಯಮತ್ತೂರು ತಾಯಿಯೇ ಪುನರ್ಜನ್ಮವೆತ್ತಿ ಬಂದಳೋ ಎಂದು ನಾನು ಭ್ರಾಂತನಾದೆ. ಈ ಶಿಷ್ಯಳು ನಿಮ್ಮ ಕೀರ್ತಿ ಬೆಳೆಸುತ್ತಾಳೆ ಶಾಸ್ತ್ರಿಗಳೇ"[6]

ಎಲ್ಲ ಕ್ಷೇತ್ರಗಳಲ್ಲಿರುವಂತೆ ಸಂಗೀತ ಕ್ಷೇತ್ರದಲ್ಲೂ ಈರ್ಷೆ, ಮತ್ಸರ, ಅಸಮಾಧಾನಗಳಿದ್ದವು. ಅದು ಮೈಸೂರು ಮತ್ತು ಮದರಾಸಿನ ಸಂಗೀತ ಪ್ರಪಂಚದಲ್ಲಿ ಎದ್ದು ಕಾಣುತ್ತಿತ್ತು. ಮದರಾಸು ಸಂಗೀತ ಅಕಾಡೆಮಿಯ ಅಧ್ಯಕ್ಷರಾಗಿದ್ದ ಟೈಗರ್ ವರದಾಚಾರ್ಯರ ಕೋರಿಕೆಯಂತೆ ಅಕಾಡೆಮಿಯ ಸಂಗೀತೋತ್ಸವ ಅಧ್ಯಕ್ಷತೆಯನ್ನು ಬಹಳ ಸಂತೋಷದಿಂದ ವಹಿಸಿಕೊಳ್ಳುತ್ತಾರೆ. ಕಾರ್ಯಕ್ರಮ ಉದ್ಘಾಟನೆ ಮಾಡಿದ ಸರ್ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್ ಅವರು ಹೇಳಿದ ಮೈಸೂರು, ಮದರಾಸು ಸಂಗೀತ ಪದ್ಧತಿಗಳಲ್ಲಿರುವ ವ್ಯತ್ಯಾಸ ಹೋಗಬೇಕೆಂಬ ಮಾತನ್ನು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಶಾಸ್ತ್ರಿಗಳನ್ನು ಹೀಗೆ ವಿಮರ್ಶಿಸುತ್ತಾರೆ. "ತೋಟದಲ್ಲಿ ಹಲವು ಬಗೆಯ ಹೂಗಳಿದ್ದಂತೆ ಸಂಗೀತದಲ್ಲಿ ಹಲವು ಪ್ರಕಾರಗಳಿವೆ. ಇವೆಲ್ಲವೂ ಸ್ವಂತ್ರವಾಗಿ ಬೆಳೆದು ವರ್ಧಿಸಬೇಕು. ಕೇವಲ ಶಾಸ್ತ್ರವನ್ನು ಬಲಪಡಿಸಿಕೊಂಡು, ಸಂಗೀತ ಬೆಳೆಸಲು ಸಾಧ್ಯವಿಲ್ಲ. ಸಂಗೀತ ವ್ಯಕ್ತಿಯನ್ನವಲಂಬಿಸಿರುವ ಕಲೆ. ವ್ಯಕ್ತಿಯ ಸಂಸ್ಕೃತಿ, ಸಂಸ್ಕಾರ, ಕಲಾನೈಪುಣ್ಯಗಳ ಗಾಜಿನ ಪಾತ್ರೆಯ ಆಕಾರವನ್ನೆ ಸಂಗೀತ ತಳೆಯುತ್ತದೆ. ಸಂಗೀತದ ಶಾಸ್ತ್ರಭಾಗದಲ್ಲಿ ನಾವು ಒಂದು ಕ್ರಮವನ್ನೇರ್ಪಡಿಸಬಹುದಲ್ಲದೆ ಕಲಾಭಾಗದಲ್ಲಿಯಲ್ಲ.

ಕಲೆ ಎಷ್ಟು ಬಗೆಯಲ್ಲಿ ಅಭಿವ್ಯಕ್ತಿಯಾದರೆ ಅಷ್ಟು ಚೆನ್ನ–ಸಂಗೀತ ಸಂವರ್ಧನಕ್ಕೆ ಅಷ್ಟು ಸಹಾಯಕಾರಿ"[7]

ಉತ್ತಮ ಸಂಗೀತಕ್ಕೆ ಮಹಾರಾಜರು ಮಹತ್ವ ಕೊಡುತ್ತಾರೆಂಬುದನ್ನು ಗೌರಯ್ಯ ಮತ್ತು ಶೇಷರ ಮಹಾರಾಜರ ಸನ್ನಿಧಾನದಲ್ಲಿನ ಕಛೇರಿಯೇ ಸಾಕ್ಷಿ. ದಕ್ಷಿಣಾಮೂರ್ತಿಶಾಸ್ತ್ರಿಗಳು ತಮ್ಮ ಶಿಷ್ಯ ಗೌರಯ್ಯನನ್ನು ಅರಮನೆಯ ವಿದ್ವಾಂಸನನ್ನಾಗಿ ಮಾಡಬೇಕೆಂಬ ಹಂಬಲದಿಂದ ಅರಮನೆಯಲ್ಲಿ ಸಂಗೀತ ಕಛೇರಿಗೆ ಗೊತ್ತು ಮಾಡುತ್ತಾರೆ. ಇತ್ತ ವಿದ್ವಾಂಸ ಸುಬ್ಬಣ್ಣನವರೂ ಗೌರಯ್ಯನಿಗಿಂತ ನೂರು ಪಾಲು ಮೇಲೆಂದು ಶೇಷನನ್ನು ಹೊನ್ನೂರಪ್ಪನ ಮೂಲಕ ಕರೆಯಿಸಿ ಅರಮನೆಯಲ್ಲಿ ಮಹಾರಾಜರೆದುರು ಕಛೇರಿ ನೀಡಲು ಗೊತ್ತುಪಡಿಸುತ್ತಾರೆ. ಸಂಗೀತ ಕಛೇರಿಗೆ ವಸಂತ ಮಹಲ್‌ನಲ್ಲಿ ವ್ಯವಸ್ಥೆ ಕಲ್ಪಿಸಲಾಗಿತ್ತು. ಕಛೇರಿಯನ್ನು ಸುವ್ಯವಸ್ಥಿತವಾಗಿ ನಡೆಸಲಾಗುತ್ತದೆ. ವಿಶಾಲ ಸಭಾಂಗಣದ ಮಧ್ಯಭಾಗದಲ್ಲಿ ಮಹಾರಾಜರ ಪೀಠ. ಅದರ ಹಿಂದೆ ಪರದೆ ಹಾಕಿ ರಾಣಿಯರು ಸಂಗೀತ ಆಲಿಸಲು ಅನುಕೂಲ ಮಾಡಲಾಗಿತ್ತು. ಅರಸನ ಪೀಠದೆದುರಿಗೆ ಸಂಗೀತಗಾರರಿಗೆ ಸ್ಥಳಾವಕಾಶ ಮಾಡಲಾಗಿತ್ತು. ಆಸ್ಥಾನ ವಿದ್ವಾಂಸರು, ಅರಮನೆಯ ಅಧಿಕಾರಿಗಳು ಅಲ್ಲಿ ನೆರೆದಿರುತ್ತಾರೆ.

ಗಾಯನದ ಪ್ರಾರಂಭದ ಸಂದೇಶ, ಮುಕ್ತಾಯ ಮತ್ತು ಇತರ ಸೂಚನೆಗಳೆಲ್ಲವೂ ಕಣ್ಸನ್ನೆಯಲ್ಲೆ ನಡೆಯುತ್ತಿದ್ದವು. ಮಹಾಸ್ವಾಮಿಯವರಿಂದ ಭಕ್ಷಿಗಳಿಗೆ, ಭಕ್ಷಿಗಳಿಂದ ವಿದ್ವಾಂಸರಿಗೆ, ವಿದ್ವಾಂಸರಿಂದ ಗಾಯಕರಿಗೆ ಸೂಚನೆಗಳಾಗುತ್ತಿದ್ದವು. ಗೌರಯ್ಯ ಗಾಯನ ಪ್ರಾರಂಭ ಮಾಡಿ ಖರಹರಪ್ರಿಯರಾಗದ ಮುಕ್ತಾಯ ಹಾಡುವಾಗ ಕಾಲುಗಂಟೆಯಲ್ಲಿ ಮಹಾಸ್ವಾಮಿಯವರಿಂದ ಭಕ್ಷಿಗಳಿಗೆ, ಭಕ್ಷಿಗಳು ಶಾಸ್ತ್ರಿಗಳಿಗೆ, ಶಾಸ್ತ್ರಿಗಳು ಗೌರಯ್ಯನಿಗೆ ಮುಕ್ತಾಯಗೊಳಿಸುವಂತೆ ಸೂಚನೆಗಳು ಮಿಂಚಿನ ವೇಗದಲ್ಲಿ ಹರಿದಾಡಿದವು. ಮಹಾರಾಜರ, ಅಧಿಕಾರಿಗಳ, ವಿದ್ವಾಂಸರ ವೃಥಾ ಕಾಲಹರಣವಾಗುವುದು ಇದರಿಂದ ತಪ್ಪುತ್ತದೆ ಎಂಬ ಆಲೋಚನೆ ಇದ್ದಿತು. ಅಲ್ಲದೆ ಉತ್ತಮ ಸಂಗೀತಗಾರನಿಗೆ ಅರಮನೆಯ ಗೌರವ, ಸನ್ಮಾನಗಳು ಸಲ್ಲಬೇಕೆಂಬ ಆಶಯ ಅರಸರಲ್ಲಿದ್ದಿತು. ಶೇಷನ ಗಾಯನವನ್ನು ಅರಸರು ಪ್ರಸನ್ನ ವದನರಾಗಿ ಕೇಳಿದರು. ಮುಕ್ಕಾಲು ಗಂಟೆ ಅವನ ಸಂಗೀತ ಕೇಳುತ್ತಾರೆ. ಕಛೇರಿ ನಿಲ್ಲಿಸಿದ ಬಳಿಕ ಮಹಾರಾಜರು ಸುಬ್ಬಣ್ಣನ ಬಳಿ "ಚಿರಂಜೀವಿ ಬಹಳ ಚೆನ್ನಾಗಿ ಹಾಡುತ್ತಾನೆ. ನಮಗೆ ತುಂಬಾ ಸಂತೋಷವಾಯಿತು" ಎಂದು ಶಾಸ್ತ್ರಿಗಳ ಬಳಿ "ನಿಮ್ಮ ಶಿಷ್ಯನೂ ಚೆನ್ನಾಗಿ ಹಾಡುತ್ತಾನೆ ಆದರೆ ಮನೋಧರ್ಮ ಬೆಳೆಸಿಕೊಂಡಿಲ್ಲ" ಎಂದು ಹೇಳಿದುದು ಅರಸರಲ್ಲಿದ್ದ ಕಲಾಪೋಷಣೆ, ಕಲಾಪ್ರೋತ್ಸಾಹ ಮತ್ತು ನಿಜವಾದ ಪ್ರತಿಭೆಗಳನ್ನು ಗುರುತಿಸಿ ಬೆಳೆಸುವ ಮನೋಭಾವಗಳು ಕಾಣಿಸುತ್ತವೆ. ಅರಸರನ್ನು ತನ್ನ ಗಾಯನದಿಂದ ಸಂತುಷ್ಟ ಪಡಿಸಿದ ಶೇಷನನ್ನು ಬಳಿ ಕರೆದು "ವೈಣಿಕ ಶಿಖಾಮಣಿ ಸುಬ್ಬಣ್ಣನವರ ಶಿಷ್ಯನಾಗುವುದು ದೊಡ್ಡ ಜವಾಬ್ದಾರಿ ಮಗೂ– ಅವರನ್ನು ಮೀರಿಸುವಂಥ ಜ್ಞಾನ ನೀನು ಸಂಪಾದಿಸಿದರೇ ಅವರಿಗೆ ತೃಪ್ತಿ" ಎಂದು ಆಡಿದ ಮಾತುಗಳೂ ಗಮನ ಸೆಳೆಯುತ್ತವೆ.

ಸಂಗೀತ ಕಛೇರಿಗಳಲ್ಲಿ ಮುಖ್ಯಸಂಗೀತಗಾರ ಹಾಡುವ ಭಾಗವನ್ನು ಸಹಗಾಯಕ ಅನುಸರಿಸಿ ಹಾಡುವುದು ಪದ್ಧತಿ. ಇದರಿಂದ ಶ್ರೋತೃಗಳಿಗೆ ರಸಾನುಭವ ಉಂಟಾಗಿ ಕೇಳಲು ಉತ್ಸಾಹ ಬರುತ್ತದೆ. ಕೃಷ್ಣಪ್ಪನವರ ರಾಮಮಂದಿರದ ಕಛೇರಿಗೆ ದಕ್ಷಿಣಾಮೂರ್ತಿಶಾಸ್ತ್ರಿಗಳು ಗೌರಯ್ಯನನ್ನು ಹಾಡಲು ಕರೆದೊಯ್ದಾಗ ಶಾಸ್ತ್ರಿಗಳು ಕೀರ್ತನೆಗಳನ್ನು ಹಾಡಿ 'ತೋಡಿ' ರಾಗ ಆರಂಭಿಸಿದಾಗ ಅವರ ವಿಳಂಬಕಾಲ ಅನುಸರಿಸುವುದು ಗೌರಯ್ಯನಿಗೆ ಕಷ್ಟವಾದುದರ ಜೊತೆ ಮೃದಂಗ ಸಾಥ್ ಕೊಡಲೂ ಹೊನ್ನೂರಪ್ಪನಿಗೆ ಸಾಧ್ಯವಾಗಲಿಲ್ಲ. ಮಧ್ಯಮ ಕಾಲದಲ್ಲಿ ಹಾಡುವಾಗ ಸ್ವಲ್ಪ ಧೈರ್ಯದಿಂದ ಗೌರಯ್ಯ ಶಾಸ್ತ್ರಿಗಳನ್ನನುಸರಿಸಿ ಹಾಡಿದುದಲ್ಲದೆ

ಮುಂದಿನ ಸಂಗತಿಗಳನ್ನು ನಿರೀಕ್ಷಿಸಿದ. ಎರಡು ಮೂರು ಬಾರಿ ಶಾಸ್ತ್ರಿಗಳು ಎಚ್ಚರಿಕೆ ಕೊಟ್ಟರೂ ತನ್ನ ಜಾಡಿನಲ್ಲೆ ತನ್ನ ಅಲ್ಪತನದ ಹಾಡುಗಾರಿಕೆಯನ್ನು ತೋರಿಸಿದ ಗೌರಯ್ಯನ ಕಪಾಳಕ್ಕೆ ಹೊಡೆಯುತ್ತಾರೆ. ಅವನನ್ನು ನಿಂದಿಸಿ ಕಾಲ ಪ್ರಮಾಣವನ್ನೆ ಬದಲಾಯಿಸಿ ಸಂಗತಿಗಳನ್ನು ಹಾಡಲು ಶುರು ಮಾಡುತ್ತಾರೆ. ಗೌರಯ್ಯ ಅವರನ್ನನುಸರಿಸಿ ಹಾಡಲಾರದೆ ಅಪಮಾನಿತನಾಗುತ್ತಾನೆ.

ಅ.ನ.ಕೃ. ಅವರ 'ಮಿಯಾಮಲ್ಹಾರ' ಕೃತಿಯಲ್ಲಿ ಮೆಹಬೂಬಖಾನರು ತಮ್ಮ ಹೋಟೆಲಿನ ಅಟ್ಟದ ಮೇಲೆ ವ್ಯವಸ್ಥೆ ಮಾಡಿದ್ದ ಜಲಸಾ (ಕಛೇರಿ)ಗೆ ಲಖ್ನೋದಿಂದ ಗಾಯಕರಾದ ಅಹಮದ್ ಹುಸೇನ್‌ಖಾನರ ಆಗಮನ ಕಳೆ ತಂದಿತ್ತು. ಮೆಹಬೂಬ್‌ಖಾನರ ಆಹ್ವಾನದ ಮೇರೆಗೆ ಪೀರು ಆಗಮಿಸಿರುತ್ತಾನೆ. ಹುಸೇನ್‌ಖಾನರು 'ಭೈರವಿ'ರಾಗ ಹಾಡಿ ತಮ್ಮ ಗಾಯನ ಮುಕ್ತಾಯಗೊಳಿಸಿದ ನಂತರ ಪೀರುವಿನ ಕೈಗೆ ಮೆಹಬೂಬ್‌ಖಾನ್‌ರಿಂದ ತಂಬೂರಿ ಬಂದಾಗ ಮೊದಲ ಸಂಗೀತ ಕಛೇರಿಯಾದ್ದರಿಂದ ಅವನ ಕೈನಡುಗುತ್ತಿದ್ದವು. ಹಣೆ ಬೆವೆತು ಹೋಗಿತ್ತು. ಎಷ್ಟೇ ಕಲಿತ ಸಂಗೀತಗಾರನಾದರೂ ಮೊದಲ ಕಛೇರಿಯಲ್ಲಿ ಅದೂ ನುರಿತ ಸಂಗೀತಗಾರರೆದುರು ಹಾಡುವುದು ಕಷ್ಟವೇ. ಭಯ, ಆತಂಕಗಳಿರುತ್ತವೆ. ಪೀರು ತಂಬೂರಿಯ ಶ್ರುತಿಗೆ ತನ್ನ ದನಿಯನ್ನು ಸೇರಿಸಿ 'ಮಾಲಕಂಸ್'ರಾಗ ಹಾಡಲು ಆರಂಭಿಸಿ ಅರ್ಧಗಂಟೆ ಹಾಡಿ ಮುಗಿಸುವಾಗ ಹುಸೇನ್‌ಖಾನರ ಕೋರಿಕೆಯಂತೆ 'ನಾಯಕಿ ಕಾನಡ' ರಾಗವನ್ನು ಹಾಡಿದ. ಈ ಎರಡೂ ರಾಗಗಳು ಹಿಂದೂಸ್ತಾನಿ ರಾಗಗಳೇ. ಈ ರಾಗ ಹಾಡಿದ ನಂತರ ಪೀರುವಿನ ಭಯವೆಲ್ಲ ಹೊರಟು ಹೋಯಿತು. ಇದೇ ಹುಮ್ಮಸ್ಸಿನಲ್ಲಿ ಖ್ಯಾತ ರಾಗಗಳಾದ ದುರ್ಗಾ, ಖಂಬಾವತಿ, ಜಯಜಯವಂತಿ ರಾಗಗಳನ್ನು ಪೀರು ಮನೋಜ್ಞವಾಗಿ ಹಾಡುತ್ತಾನೆ. ಆತನ ಗಾಯನ ಕೇಳಿದ ಹುಸೇನ್‌ಖಾನರು ಮೆಚ್ಚುಗೆಯ ಮಾತುಗಳನ್ನಾಡುತ್ತಾರೆ. ಜೊತೆಗೆ ಇನ್ನು ಸುಧಾರಿಸಿಕೊಳ್ಳಬೇಕಾದ ಅಂಶಗಳನ್ನೂ ಹೇಳುತ್ತಾರೆ. ಏಕೆಂದರೆ ಸಂಗೀತ ಜೀವಮಾನ ಪೂರ್ತಿ ಕಲಿತರೂ ಮುಗಿಯಲಾರದ ಸಮುದ್ರವಾಗಿದೆ. ಅಸ್ತಿಭಾರ ಸೊಗಸಾಗಿದೆ ಆದರೆ ಅಭ್ಯಾಸ ಹೆಚ್ಚಾಗಬೇಕು ಎಂದು ಅವರು ಕಿವಿಮಾತನ್ನು ಹೇಳುತ್ತಾರೆ. "ತಾಲೀಂ ಸಾಲದು, ಒಂದೊಂದು ರಾಗವನ್ನು ಸಾವಿರ, ಹತ್ತು ಸಾವಿರ ಸಲ ಹಾಡಿಕೊಳ್ಳಬೇಕು. ಖಂಬಾವತಿ, ನಾಯಕಿ ಕಾನಡಾ ಮೊದಲಾದ ರಾಗಗಳ ಗೋಜಿಗೆ ಹೋಗಬೇಡಿ. ಭೀಮ ಪಲಾಸ್, ಭಾಗೆಶ್ರೀ, ಯಮನ್ ಮೊದಲಾದ ಸುಲಭ ರಾಗಗಳನ್ನು ಅಭ್ಯಾಸ ಮಾಡಿ, ನಿಮ್ಮ ಆವಾಜ್ ಚೆನ್ನಾಗಿದೆ. ಆದರೆ ಅದರ ಮೇಲೆ ಅವಲಂಬಿಸಬೇಡಿ. ಹಾಡಿಕೆಗೆ ಆವಾಜ್ ಬೇಕು ನಿಜ; ಆದರೆ ಅದಕ್ಕೂ ಹೆಚ್ಚಾಗಿ ಅನುಭವ ಬೇಕು. ಶಾಸ್ತ್ರರೀತ್ಯಾ ನಿಮ್ಮ ಹಾಡಿಕೆ ಚೆನ್ನಾಗಿತ್ತು. ಆದರೆ ಆ ರಾಗದ ನಾಯಕ, ನಾಯಕಿ ಲಕ್ಷಣ, ಅವರ ವಿರಸ, ಸಮರಸ ಅಭಿವ್ಯಕ್ತವಾಗಲಿಲ್ಲ. ಅನುಭವ–ಈ ಶಬ್ದವನ್ನು ನೆನಪಿನಲ್ಲಿಟ್ಟುಕೊಳ್ಳಿ. ಅನುಭವವೇ ಗಾಯಕರ ಜೀವ, ಜೀವಾಳ"[8], ಅನಕೃ, ಮಿಯಾಮಲ್ಹಾರ್, ಒಬ್ಬ ಗಾಯಕನಿಗೆ ತಾಲೀಮು ಎಷ್ಟು ಮುಖ್ಯ ಎಂಬುದನ್ನು ಖಾನ್‌ಸಾಹೇಬರ ಮೇಲಿನ ಮಾತುಗಳು ಹೇಳುತ್ತವೆ. ಒಂದೊಂದು ರಾಗವನ್ನು ಸಾವಿರಾರು ಬಾರಿ ಅಭ್ಯಾಸ ಮಾಡಬೇಕು. ಅಸ್ತಿಭಾರ, ಶಾರೀರ ಚೆನ್ನಾಗಿದ್ದರೂ ಅಭ್ಯಾಸ ಬಹಳ ಮುಖ್ಯ. ಜೊತೆಗೆ ತಾನು ಹಾಡುವ ರಾಗದ ಭಾವನೆಯನ್ನು ಅರ್ಥ ಮಾಡಿಕೊಂಡು ಅದರ ಲಕ್ಷಣಗಳನ್ನು ತನ್ನ ಅನುಭವದ ಹಿನ್ನೆಲೆಯಲ್ಲಿ ಭಾವಾಭಿವ್ಯಕ್ತಪಡಿಸಬೇಕು. ಅದಕ್ಕೇ ಅಭ್ಯಾಸ ಮಾಡುವಾಗ ಸುಲಭ ರಾಗಗಳಾದ ಭಾಗೆಶ್ರೀ, ಯಮನ್, ಭೀಮಪಲಾಸ್ ರಾಗಗಳು ಕಲಿಯುವವರಿಗೆ ಸುಲಭ ರಾಗಗಳು. ಅವುಗಳನ್ನೆ ಹೆಚ್ಚು ಅಭ್ಯಾಸ ಮಾಡಲು ಖಾನ್‌ಸಾಹೇಬರು ಹೇಳುತ್ತಾರೆ. ಕಂಬಾವತಿ, ನಾಯಕಿ ಕಾನಡಾ ರಾಗಗಳು ಕಲಿಯುವವರಿಗೆ ಕಷ್ಟಕರವಾದ ರಾಗಗಳು ಹಾಗಾಗಿ ಅವುಗಳ ಗೋಜಿಗೆ ಹೋಗಬೇಡಿ ಎಂದು

ಹೇಳಿರುವುದು ಅರ್ಥಪೂರ್ಣವಾಗಿದೆ. ಪೀರುವಿನ ಧ್ವನಿ ಚೆನ್ನಾಗಿದೆ. ಆದರೆ ಅನುಭವ ಬೇಕು. ಮಾಲಕಂಸ ರಾಗವನ್ನು ಶಾಸ್ತ್ರೋಕ್ತವಾಗಿ ಚೆನ್ನಾಗಿ ಹಾಡುತ್ತಾನೆ. ಆದರೆ ಆ ರಾಗದ ನಾಯಕ ನಾಯಕಿಯರ ಭಾವನೆಗಳು, ವಿರಸ, ಸಮರಸಗಳು, ಲಕ್ಷಣಗಳು ಅಭಿವ್ಯಕ್ತವಾಗಲಿಲ್ಲವೆಂದು ಅದಕ್ಕೆ ಅನುಭವದ ಕೊರತೆಯೆ ಕಾರಣ. ಆದ್ದರಿಂದ ಗಾಯಕರಿಗೆ ಅನುಭವವೇ ಜೀವ, ಜೀವಾಳವೆಂಬ ಸಂದೇಶವನ್ನು ಖಾನ್‌ಸಾಹೇಬರು ಪೀರ್‌ಜಾದನಿಗೆ ನೀಡುತ್ತಾರೆ.

ಸಂಗೀತ ಕಚೇರಿಗಳು ರಾಜರ ಆಸ್ಥಾನಗಳಲ್ಲಿ, ಮದುವೆ, ಮುಂಜಿ ಮುಂತಾದ ಧಾರ್ಮಿಕ ಸಮಾರಂಭಗಳಲ್ಲಿ ಪೂರ್ವನಿಯೋಜಿತವಾಗಿ ವೇದಿಕೆಯ ಮೇಲೆ ಗಾಯಕರು ಹಾಡುವುದು, ಶ್ರೋತೃಗಳು ಮುಂಭಾಗದಲ್ಲಿ ಕುಳಿತುಕೊಂಡು ಕೇಳುವುದು ಒಂದಾದರೆ, ಒಮ್ಮೊಮ್ಮೆ ಸಂಗೀತಗಾರರ ಮನೆಗಳಲ್ಲಿ ಅಥವಾ ಸಂಗೀತ ಆಸಕ್ತರ ಮನೆಗಳಲ್ಲಿ ಆಕಸ್ಮಿಕವೋ ಉದ್ದೇಶಪೂರಿತವೋ ಸಂಗೀತ ಕಛೇರಿಗಳು ಏರ್ಪಡುತ್ತಿದ್ದವು. ಪೀರ್‌ಜಾದ ತನ್ನ ಗುರುಗಳು ಹರಿದಾಸ ಬುವಾರ ಮರಣಾನಂತರ ಹೆಚ್ಚಿನ ಸಂಗೀತ ಕಲಿಯಲು ಗುರುಗಳನ್ನು ಹುಡುಕುತ್ತಾನೆ. ಮೆಹಬೂಬ್ ಖಾನ್ ಅವನನ್ನು ಖಾನ್‌ಸಾಹೇಬರ ಬಳಿ ಕರೆದುಕೊಂಡು ಬರುತ್ತಾನೆ. ಪರಸ್ಪರ ಪರಿಚಯ ಅತಿಥಿ ಸತ್ಕಾರವಾದ ಮೇಲೆ ಖಾನ್ ಸಾಹೇಬರ ಸೂಚನೆಯಂತೆ ಪೀರ್‌ಜಾದ ಗಡಗಡ ನಡುಗುತ್ತ ತಂಬೂರಿ ತೆಗೆದುಕೊಳ್ಳುತ್ತಾನೆ. ಮಷ್ಟಕ್ ಅಲ್ಲಿಖಾನರ ಶಿಷ್ಯರಾದ ವಜೀರ ಅಲ್ಲಿಖಾನ ಸಾಹೇಬರು ಹಿಂದೂಸ್ತಾನಿ ಸಂಗೀತದ ಘನ ವಿದ್ವಾಂಸರು. ಅವರು ಸಂಗೀತವೆಂಬ ಕಾನನದಲ್ಲಿ ಘನವಾಗಿ ಘರ್ಜಿಸುವ ಸಿಂಹದಂತೆ, ಸಂಗೀತವೆಂಬ ಅರಣ್ಯದಲ್ಲಿ ದಾರಿಯ ಗುರುತು ಕಾಣದ ಎಳೆ ಚಿಗರೆಯಂತೆ ಪೀರು. ಅವರ ಮುಂದೆ ಹಾಡಲು ಅವನಿಗೆ ಧೈರ್ಯ ಸಾಲದೆ ನಡುಗುವುದನ್ನು ಕಂಡ ಖಾನ್ ಸಾಹೇಬರು ಧೈರ್ಯ ತುಂಬುತ್ತಾರೆ. ಪೀರು ಹಿಂದೂಸ್ತಾನಿಯ ದೇಶ್ ರಾಗ, ತಿಲಂಗ್ ಮತ್ತು ನಾಯಕಿ ಕಾನಡಾ ರಾಗಗಳನ್ನು ಹಾಡುತ್ತಾನೆ. ನಂತರ ಖಾನ್ ಸಾಹೇಬರ ಅಪ್ಪಣೆಯಂತೆ ಮಿಯಾಮಲ್ಹಾರ ರಾಗವನ್ನು ಹಾಡಿ ಮುಗಿಸುವ ಸಮಯಕ್ಕೆ ಅವರ ಕಣ್ಣುಗಳಿಂದ ನೀರು ಹರಿಯುತ್ತಿತ್ತು. ತನ್ಮಯರಾಗಿ ಕೇಳಿದ ಖಾನ್‌ಸಾಹೇಬರು ಪೀರ್‌ಜಾದನನ್ನು ಅಪ್ಪಿಕೊಂಡು ಹೊಗಳುತ್ತಾರೆ.

ಪೀರುವಿನ ಕೋರಿಕೆ, ಒತ್ತಾಯದಂತೆ ಶ್ರುತಿ ಮಾಡಿದ ತಂಬೂರಿಯನ್ನು ಕೈಗೆತ್ತಿಕೊಂಡ ಖಾನ್‌ಸಾಹೇಬರು ಶ್ರುತಿಯ ಕಡೆಗೇ ಏಕಾಗ್ರತೆಯಿಂದ ಚಿತ್ತಗೊಟ್ಟು ಎರಡು ನಿಮಿಷಗಳ ನಂತರ ವಿಳಂಬಕಾಲದಲ್ಲಿ ಅವರು ಎತ್ತಿಕೊಂಡ ರಾಗ, ಆ ರಾಗದ ನಾಲ್ಕೈದು ಆವರ್ತನಗಳನ್ನು ಆಲಿಸಿದ ಪೀರುವೇ ಕಕ್ಕಾಬಿಕ್ಕಿಯಾಗುತ್ತಾನೆ. ರಾಗಗಳನ್ನು ಕರಗತಮಾಡಿಕೊಂಡ ವಿದ್ವಾಂಸರು ಹಾಡುವ ಸಂದರ್ಭದಲ್ಲೆ ಪ್ರಯೋಗಿಸುವ ಸ್ವರ, ಆಲಾಪ, ಸಂಚಾರಕ್ರಮ, ನಿಲುಗಡೆ ಸ್ಥಾನ ಮುಂತಾದವುಗಳು ವೈವಿಧ್ಯಮಯವಾಗಿರುತ್ತವೆ. ಪೀರು ಆ ರಾಗವನ್ನು ಗುರುತಿಸಲು ವಿಫಲವಾಗುತ್ತಾನೆ. ಕೊನೆಗೆ ಖಾನ್‌ಸಾಹೇಬರೇ 'ಮಿಯಾಮಲ್ಹಾರ್' ಎಂದು ತಿಳಿಸುತ್ತಾರೆ. ಒಂದೂವರೆ ಗಂಟೆಕಾಲ ದೀರ್ಘವಾಗಿ ಹಾಡಿದ ಅವರ ಗಾಯನದಲ್ಲಿ ಆ ರಾಗದ ವಿಸ್ತರಣೆ, ತಾನಗಳನ್ನು ಸುಮಧುರವಾಗಿ, ವೇಗವಾಗಿ ಹಾಡಿದ ರೀತಿ, ಸ್ವರಗಳ ನಿಲುಗಡೆ ಮುಂತಾದವುಗಳನ್ನು ಪೀರು ತದೇಕ ಚಿತ್ತದಿಂದ ಬಹುಸೂಕ್ಷ್ಮವಾಗಿ ಆಲಿಸುತ್ತಿದ್ದುದು ಅವನಲ್ಲಿ ಆಸಕ್ತಿ, ತಾನಿನ್ನೂ ಕಲಿಯಬೇಕಾದುದು ತುಂಬಾ ಇದೆ ಎಂಬುದು ಅವನ ಈ ಮಾತುಗಳಲ್ಲಿ ಅರ್ಥವಾಗುತ್ತದೆ.

**ಕೊನೆ ಟಿಪ್ಪಣಿ**


1. ಚಿದಾನಂದಮೂರ್ತಿ. (1984). *ಕನ್ನಡ ಸಾಹಿತ್ಯ ಶಾಸನಗಳಲ್ಲಿ ಸಂಗೀತ ವಿಚಾರ.* ಪುಟ.9
2. ಅನಕೃ. (1935). *ಸಂಧ್ಯಾರಾಗ.* ಪುಟ. 77
3. ಅನಕೃ. (1963). *ಕಟ್ಟಿದ ಬಣ್ಣ.* ಪುಟ. 53

4. *ಅದೇ.* ಪುಟ. 55
5. ಅನಕೃ. (ಸಂ.) (1964). *ಭಾರತೀಯ ಕಲಾದರ್ಶನ.* ಪು.ಸಂ–5
6. ಅನಕೃ. (1963). *ಪೂರ್ವೋಕ್ತ.* ಪುಟ. 61
7. ಅದೇ. ಪುಟ. 93
8. ಅನಕೃ. (1960). *ಮಿಯಾಮಲ್ಹಾರ.* ಪುಟ.65

**ಪರಾಮರ್ಶನ ಕೃತಿಗಳು**


- ಅನಕೃ. (1935). *ಸಂಧ್ಯಾರಾಗ.* ಮನೋಹರ ಗ್ರಂಥಮಾಲಾ.
- ಅನಕೃ. (1963). *ಕಟ್ಟಿದ ಬಣ್ಣ.* ಪೂರ್ಣಿಮ ಪ್ರಿಂಟರ್ಸ್.
- ಅನಕೃ.(1964). *ಭಾರತೀಯ ಕಲಾದರ್ಶನ.* ಸಂಗೀತ ನಾಟಕ ಅಕಾಡೆಮಿ.
- ಅನಕೃ. (1960). *ಮಿಯಾಮಲ್ಹಾರ್.* ಹೇಮಂತ ಸಾಹಿತ್ಯ.
- ಚಿದಾನಂದಮೂರ್ತಿ. (1984). *ಕನ್ನಡ ಸಾಹಿತ್ಯ ಶಾಸನಗಳಲ್ಲಿ ಸಂಗೀತ ವಿಚಾರ.* ಬೆಂಗಳೂರು ವಿಶ್ವವಿದ್ಯಾನಿಲಯ.
- ಹನುಮಣ್ಣನಾಯಕ ದೊರೆ. (2008). *ರಾಗದೀಪಿಕೆ.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.